ಕಥೆ

# ಗಾಂಧಿಯವರ ಕನ್ನಡಕ

 

ಹಿಂದಿ ಮೂಲ: **ಹರೀಶ್ ನವಲ್**
ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**
ಕಲೆ: ಜಬೀವುಲ್ಲಾ ಎಂ. ಅಸದ್

ಕಂಪನೀಬಾಗ್‌ನ ಅಹಿಂಸಾನಗರ ಮಹತ್ವದ ಪ್ರದೇಶವಾಗಿತ್ತು; ಏಕೆಂದರೆ ಅಲ್ಲಿ ಗಾಂಧಿಯವರ ಒಂದು ವಿಶಾಲ ಪ್ರತಿಮೆಯಿತ್ತು. ಶುಭ ಯಾತ್ರೆ ಅಥವಾ ಶೋಭಾ ಯಾತ್ರೆ ಅಥವಾ ರಾಜಕೀಯ ರ‍್ಯಾಲಿ ನಗರದಲ್ಲಿ ಸಾಗುವ ಸಂದರ್ಭದಲ್ಲಿ, ಅದರ ಶುಭಾರಂಭ ಗಾಂಧಿಯವರ ಈ ಪ್ರತಿಮೆಯಿಂದಲೇ ಆರಂಭವಾಗುತ್ತಿತ್ತು. ಚಳವಳಿ ನಡೆದಾಗ, ಚಳವಳಿಗಾರರು ಇದೇ ಪ್ರತಿಮೆಯ ಕೆಳಗೆ ಬಂದು ಶಪಥ ಕೈಗೊಳ್ಳುತ್ತಿದ್ದರು.

ಅಕ್ಟೋಬರ್ 2ರಂದು ಗಾಂಧಿಯವರ ಪ್ರತಿಮೆಯಿದ್ದಲ್ಲಿ ಅವರ ಜಯಂತಿಯ ಸಮಾರಂಭವನ್ನು ಆಯೋಜಿಸಲಾಗುತ್ತದೆ ಎಂಬುದು ಎಲ್ಲರಿಗೂ ತಿಳಿದಿದೆ. ಅಹಿಂಸಾ ನಗರದಲ್ಲಿಯೂ ಗಾಂಧಿಯವರ ಜಯಂತಿಯ ಸಮಾರಂಭ ಏರ್ಪಾಡಾಗಿತ್ತು.

ಗಾಂಧಿಯವರ ಈ ಪ್ರತಿಮೆಯನ್ನು ದೇಶದ ಓರ್ವ ಶ್ರೇಷ್ಠ ಶಿಲ್ಪಿ ನಿರ್ಮಿಸಿದ್ದ; ಇದಕ್ಕಾಗಿ ಅವನಿಗೆ ದೊಡ್ಡ ಮೊತ್ತದ ಹಣವನ್ನು ಕೊಡಲಾಗಿತ್ತು. ಈ ಪ್ರತಿಮೆಯ ವಿಶೇಷ ಏನಾಗಿತ್ತೆಂದರೆ, ಇದನ್ನು ಒಂದೇ ಬಂಡೆಯನ್ನು ಕತ್ತರಿಸಿ, ಬೇರಾವುದೇ ಕಲ್ಲನ್ನು ಜೋಡಿಸದೆ ಕೆತ್ತಲಾಗಿತ್ತು. ಗಾಂಧಿಯವರ ಚಪ್ಪಲಿಗಳು, ಧೋತಿ, ಜೇಬಿನ ಗಡಿಯಾರ ಮತ್ತು ಕನ್ನಡಕವನ್ನು ಸಹ ಅದೇ ಬಂಡೆಯಿಂದ ಕೆತ್ತಲಾಗಿತ್ತು; ಇದು ಪ್ರೇಕ್ಷಕರಿಗೆ ಆಶ್ಚರ್ಯದ ವಿಷಯವಾಗಿತ್ತು.

ಈ ಬಾರಿ ಗಾಂಧಿ ಜಯಂತಿಯ ಸಿದ್ಧತೆಗಳು ಆರಂಭಗೊಂಡವು. ಪ್ರತಿಮೆಯನ್ನು ಸ್ವಚ್ಛಗೊಳಿಸುವ ಗಾಂಧಿ ಭಕ್ತರು, ಗಾಂಧಿಯವರ ಕನ್ನಡಕ ಮಾಯವಾಗಿರುವುದನ್ನು ನೋಡಿದರು. ಅವರು ಹೆದರಿದರು, ಒಬ್ಬ ಸ್ವಚ್ಛಗೊಳಿಸಲು ಹಾಕಲಾಗಿದ್ದ ಏಣಿಯಿಂದ ಕೆಳಗೆ ಬಿದ್ದ; ಹಾಗಂತ ಅನೇಕರು ಈಗಾಗಲೇ ಚಾರಿತ್ರ್ಯದ ದೃಷ್ಟಿಯಿಂದ ಕೆಳಗೆ ಬಿದ್ದಿದ್ದರು.

ಅಲ್ಲಿ ಕೋಲಾಹಲವೇ ಹಬ್ಬಿತು, ನೋಡ ನೋಡುತ್ತಿರುವಂತೆಯೇ ದೊಡ್ಡ ಗುಂಪು ಕಲೆಯಿತು. ಅಲ್ಲಿಗೆ ಅನೇಕ ಕಾರ್ಯಕರ್ತರು ಮತ್ತು ಜನರ ಗುಂಪೇ ಬರಲಾರಂಭಿಸಿತು. ಕನ್ನಡಕ ಪ್ರತಿಮೆಯ ಒಂದು ಭಾಗವೇ ಆಗಿತ್ತು, ಅದನ್ನು ಪ್ರತ್ಯೇಕವಾಗಿ ಜೋಡಿಸಿರಲಿಲ್ಲ, ಹೀಗಿರುವಾಗ ಅದು ಹೇಗೆ ಮಾಯವಾಯಿತು? ಇದು ಎಲ್ಲರ ಆಶ್ಚರ್ಯಕ್ಕೆ ಕಾರಣವಾಗಿತ್ತು.

ಮನುಷ್ಯನಿಗಿಂತ ಮೂರು ಪಟ್ಟ ಎತ್ತರದ ಈ ಪ್ರತಿಮೆಗೆ ಯಾರೂ ಕನ್ನಡಕವನ್ನು ಹಾಕಲು ಸಾಧ್ಯವಿರಲಿಲ್ಲ. ಅದಕ್ಕೆ ವಿಶೇಷವಾದ ವ್ಯವಸ್ಥೆಯನ್ನೇ ಮಾಡಬೇಕಿತ್ತು. ಕನ್ನಡಕವಿಲ್ಲದ ಗಾಂಧಿ, ಗಾಂಧಿಯಂತೆಯೇ ಕಾಣಬರುತ್ತಿರಲಿಲ್ಲ. ಇದು ಮೀಡಿಯಾದವರಿಗೆ ದೊಡ್ಡ ಸುದ್ದಿಯಾಗಿತ್ತು;